ದೀಪವಾರಿಸಿದ ನಂತರ ಪುನಃ ಒಂಟಿತನದ ವಿಷಾದಭಾವವನ್ನೇ ಅವರೊಳಗೆ ಸ್ಥಾಯಿಯಾಗಿಸುತ್ತದೆ. 'ಟೀವಿಯು ಕೊನೆಗೂ ಮನುಷ್ಯರನ್ನು ಒಂಟಿಯಾಗಿ ಉಳಿಸುವ ಮನರಂಜನಾ ಮಾಧ್ಯಮ' ಅಂತ ಇಂಗ್ಲಿಷ್ ಕವಿ ಟಿ.ಎಸ್. ಎಲಿಯಟ್ ಹೇಳಿರುವುದು ಎಷ್ಟೊಂದು ಸರಿಯಾಗಿದೆ ಅಲ್ಲವೇ? ಆಲೋಚಿಸಿದಷ್ಟೂ ಆಳವಾಗುವ ರಂಗ ನಿರ್ದೇಶಕ ಬಿ.ವಿ. ಕಾರಂತರದೊಂದು ಪ್ರಖ್ಯಾತ ಹೇಳಿಕೆ ಹೀಗಿದೆ: 'ಟೀವಿಯಲ್ಲಿ ಮನುಷ್ಯ ತಾನಿರುವುದಕ್ಕಿಂತ ಸಣ್ಣವನಾಗಿ ಕಂಡರೆ, ಸಿನಿಮಾದಲ್ಲಿ ತಾನಿರುವುದಕ್ಕಿಂತ ದೊಡ್ಡವನಾಗಿ ಕಾಣಿಸ್ತಾನೆ. ಆದರೆ ಮನುಷ್ಯ ಇದ್ದುದು ಇದ್ದಂತೆ ಕಾಣಿಸುವುದು ಕೇವಲ ರಂಗಭೂಮಿಯಲ್ಲಿ ಮಾತ್ರ!'



ಮೊದಲು ದೇಶಕ್ಕೆಲ್ಲ ಒಂದೇ ಚಾನೆಲ್ಲಿತ್ತು. ಅದರಲ್ಲೂ ದಿನಕ್ಕೊಂದು ತಾಸಷ್ಟೇ ಸುದ್ದಿ ಪ್ರಸಾರವಾಗುತ್ತಿತ್ತು. ವಾರಕ್ಕೊಮ್ಮೆ ಸಿನಿಮಾ! ಆದರೆ ಇವತ್ತು ಇಪ್ಪತ್ನಾಲ್ಕು ತಾಸು ಸುದ್ದಿಯನ್ನೇ ಒದರುವ ಚಾನೆಲ್ಲುಗಳ ಸಂಖ್ಯೆಯೇ ಎರಡಂಕಿ ದಾಟಿದೆ. ಸುದ್ದಿ ಚಾನೆಲ್ಲುಗಳ ಸಂಖ್ಯೆ ಜಾಸ್ತಿಯಾಯಿತೆಂದು ಸಮಾಜದಲ್ಲಿ ಸುದ್ದಿ ಘಟಿಸುವ ಪ್ರಮಾಣ ಜಾಸ್ತಿಯಾಗುತ್ತದೆಯೇ? ಆಗ ಹುಟ್ಟಿದ್ದೇ ನ್ಯೂಸ್ ಅಂದರೆ ಬರೀ ಕಲೆಕ್ಷನ್ ಅಲ್ಲ, ಬದಲಿಗೆ ಅದು ಕ್ರಿಯೇಷನ್ ಎಂಬ ಫಾರ್ಮುಲಾ. ಅಲ್ಲಿಂದಲೇ ಗಣ್ಯರ ಮನೆಯ ನಾಯಿ ಕಳೆದರೂ ಅದರದೊಂದು ಅರ್ಧ ಗಂಟೆಯ ಸ್ಟೋರಿ ಮಾಡಬಹುದು ಎಂಬ ಕಲ್ಪನೆ ಶುರುವಾಗಿದ್ದು. ಅದರ ಬಣ್ಣ, ಬಾಲದ ಟೈಪು, ಆಹಾರ, ದಿನಚರಿಗಳ ವಿವರಣೆ ಜೊತೆಗೆ, 'ಈಗ ನಿಮಗೆ ಹೇಗನಿಸ್ತಾ ಇದೆ?' ಅಂತ ಮಾಲೀಕಳನ್ನು ಪ್ರಶ್ನಿಸುವ ರಿಪೋರ್ಟರು, 'ನಾಯಿಗಳೇಕೆ ಹೀಗಾಡ್ತವೆ' ಅಂತ ವಿವರಿಸುತ್ತಿರುವ ಒಬ್ಬ ವೆಟರಿನರಿ ಡಾಕ್ಟರು! ಸದ್ಯ ನೋಡುವವನ ಕೈಯಲ್ಲಿ ರಿಮೋಟ್ ಅಂತ ಒಂದಿರುತ್ತದಾಗಿ ಅವನು ಬಚಾವ್.

ಮೊದಲೆಲ್ಲ 'ಇವತ್ತಿನ ಸುದ್ದಿ, ನಾಳೆಗೆ ರದ್ದಿ' ಅಂತಿದ್ರು. ಈಗ ಹಾಗೆಲ್ಲ ಇಲ್ಲ. 'ಇವತ್ತಿನ ರದ್ದಿಯೇ ನಾಳಿನ ಸುದ್ದಿ' ಇನ್ನೂ ಒಂದು ಹೆಜ್ಜೆ ಮುಂದೆ ಯೋಚಿಸಬಹುದಾದರೆ, 'ಈಗಿನ ರದ್ದಿಯೂ ಈಗಿನ ಸುದ್ದಿಯೇ'! 'ಪುಷ್ಪಕವಿಮಾನ'ದ ನಾಯಕನಂತೆ ಆ ರದ್ದಿಯನ್ನು ಆಕರ್ಷಕ ಡಬ್ಬಿಯಲ್ಲಿಟ್ಟು, ಅದಕ್ಕೆ ಢಾಳಾದ ಪರಿಮಳ ಲೇಪಿಸಿಟ್ಟು, ಮಂದಿಗೆ ದಾಟಿಸುತ್ತಿರುವ ವಿಚಿವಿಚಿತ್ರ ಧ್ವನಿಯಲ್ಲಿ ಕುಯ್ಯೋ ಮುರ್ರೋ ಎಂದು ಕನಲುತ್ತಿರುವ ಥರೇವಾರಿ ಕೂಗುಮಾರಿ ವೀರರು! ಮೈಯೆಲ್ಲ ಕಿವಿಯಾಗಿಸಿಕೊಂಡು ಕೇಳಿಸಿಕೊಳ್ಳುತ್ತಿದ್ದ ಸುದ್ದಿ ಎಂಬುದು ಮೊದಲು ಕ್ಯಾಪ್ಸೂಲಿನಂತೆ ಚಿಕ್ಕದೂ, ಔಷಧರೂಪಿಯೂ ಆಗಿತ್ತು. ಅಂಥಾದ್ದು ಇವತ್ತು ರಬ್ಬರಿನಂತೆ ಅತಿದೀರ್ಘವಾಗಿ, ಬಬ್ಬಲ್ ಗಮ್ಮಿನಂತೆ ನಿಸ್ಸಾರವಾಗಿ, 'ಸ್ಫೋಟಕ'ವಾಗಿ, 'ಬ್ರೇಕಿಂಗ್' ಆಗಿ ಶಾಕಿಂಗೂ ಆಗ್ತಾ ಇದೆ. ಆದರೆ ಯಾವುದೂ ಯಾರ ತಲೆಯೊಳಗೂ ಇಳೀತಾ ಇಲ್ಲ, ಆಲೋಚನೆಗೆ ಹಚ್ತಾ ಇಲ್ಲ. ಅನಗತ್ಯ ಪ್ರಾಶಸ್ತ್ಯ ಮತ್ತು ಲಂಬನೆಯ ಕವರೇಜಿನಿಂದ ಪ್ರೇಕ್ಷಕನಿಗೆ ಒಂದು ರೀತಿಯ ಮಂಕು ಕವಿಯುತ್ತಿದೆ. ಇದನ್ನೇ 'ನಾರ್ಕೋಟೈಸಿಂಗ್ ಡಿಸ್‌ಫಂಕ್ಷನ್' ಅನ್ನೋದು. ಇಡೀ ಸಮಾಜಕ್ಕೆ ಅಂಥ ಒಂದು ಮಂಕು ಕವಿಸಿದೆ ಈ ಮಾಯಾವಿ. ಆದರೆ 'ಮಾಧ್ಯಮದ ಈ ತೆರನಾದ ಬ್ರೇನ್‌ಸ್ಟಾರ್ಮಿಂಗ್ ಪರಿಣಾಮ ಯಾರ ಮೇಲಾದರೂ ಆಗಬಹುದು. ಆದರೆ 'ನನ್ನ' ಮೇಲಲ್ಲ' ಅಂತ ಪ್ರತಿಯೊಬ್ಬರೂ ಅರ್ಥಹೀನ ಅಹಮ್ಮಿನಲ್ಲಿ ಎದೆ ತಟ್ಟಿಕೊಳ್ತಿದಾರೆ. ಈ ಸಮಸ್ಯೆಯನ್ನು 'ಇಲ್ಲೂಶನ್ ಆಫ್ ಪರ್ಸನಲ್ ಇನ್‌ವಲ್ನರೇಬಿಲಿಟಿ' ಅಂತ ಕರೆಯುತ್ತೆ ಮನೋವಿಜ್ಞಾನ. ಆದರೆ ಇದರ ತೆಕ್ಕೆಗೆ ತಾವಾಗಿ ಇಷ್ಟಪಟ್ಟು ಸಿಲುಕಿದವರು, ಸಿಲುಕುವುದಿಲ್ಲ ಎಂದು ಎದೆ ತಟ್ಟಿಕೊಂಡವರು ಎಲ್ಲ ಸಿಲುಕಿ ಆಗಲೇ ಹಳೇ ಕಾಲವಾಗಿದೆ ಎಂಬುದು ಮಾತ್ರ ಎಲ್ಲರಿಗೆ ತಿಳಿದಿರುವ ಸತ್ಯ.

ನನಗಿನ್ನೂ ನೆನಪಿದೆ. ನಾನು ಐದನೇ ತರಗತಿ ಓದುತ್ತಿದ್ದಾಗ ರಾಮಾಯಣ ಧಾರಾವಾಹಿ ಆರಂಭವಾಯಿತು. ಪ್ರತಿ ಭಾನುವಾರ ಟೀವಿ ಇರುವವರ ಮನೆಗಳಲ್ಲಿ ಹೇಗಾದರೂ ಜಾಗ